ಪಿ.ಡಬ್ಲ್ಯು 1

(ಇಂದು ದಿನಾಂಕಃ 06-12-2024 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀಮತಿ ಎಸ್.ಡಿ.ಎನ್. ವಕೀಲರಿಂದ**

ನಾನು ಫಿರ್ಯಾದು ಸಂಸ್ಥೆಯಲ್ಲಿ 7 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿ ಆರೋಪಿಯು ವ್ಯಾಪಾರದ ಉದ್ದೇಶಕ್ಕಾಗಿ ಸಾಲವನ್ನು ಪಡೆದಿರುತ್ತಾನೆ. ಆರೋಪಿತನಿಗೆ ಸಾಲ ನೀಡುವ ಸಂದರ್ಭದಲ್ಲಿ ಆತನ ವಾರ್ಷಿಕ ಆದಾಯದ ದಾಖಲಾತಿಗಳನ್ನು ಪಡೆದುಕೊಂಡಿದ್ದು ಇರುವುದಿಲ್ಲ. ಆರೋಪಿತನ ವಾರ್ಷಿಕ ಆದಾಯ ನನಗೆ ನೆನಪಿಲ್ಲ. ಆರೋಪಿತನಿಗೆ ನಿಂತಿರುವ ಜಾಮೀನುದಾರರು ಅನಿಷ ಬಾನು ಹಾಗೂ ಉಮೇಶ ಹೊಸಬು ಗೌಡ ಆಗಿರುತ್ತಾರೆ. ಅನಿಷಾ ಬಾನು ಮನೆವಾರ್ತೆ ಹಾಗೂ ಉಮೇಶ ಗೌಡ ರವರು ಕೂಲಿ ಕೆಲಸ ಮಾಡುತ್ತಾರೆ. ಜಾಮೀನುದಾರರ ವಾರ್ಷಿಕ ಆದಾಯ ನನಗೆ ಗೊತ್ತಿಲ್ಲ. ಜಾಮೀನುದಾರರ ವಾರ್ಷಿಕ ಆದಾಯಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿದ್ದು ಇರುವುದಿಲ್ಲ. ಸಾಲದ ಭದ್ರತೆಗಾಗಿ ಸಾಲಗಾರರಿಂದ ಹಾಗೂ ಜಾಮೀನುದಾರರಿಂದ ಜಾಗದ ಪಹಣಿ ಪತ್ರಿಕೆ ಹಾಗೂ ಖಾಲಿ ಚೆಕನ್ನು ಪಡೆದುಕೊಳ್ಳುವ ಪರಿಪಾಟ ಇರುತ್ತದೆ ಎಂದರೆ ಸರಿಯಲ್ಲ. ನಾವು ಆರೋಪಿತನಿಂದ ಸಾಲದ ಭದ್ರತೆಗಾಗಿ ಇಬ್ಬರು ಜಾಮೀನುದಾರರನ್ನು ಪಡೆದುಕೊಂಡಿರುತ್ತೇವೆ. ಆರೋಪಿತನು 24 ಕಂತಿನ ಸಾಲವನ್ನು ಪಡೆದುಕೊಂಡಿರುತ್ತಾನೆ. ಆರೋಪಿತನು ಕಟ್ಟಿಗೆ ಮಾಲ್ಕಿ ಗುತ್ತಿಗೆದಾರನಾಗಿದ್ದರು. ಆರೋಪಿಯು ಸಾಲದ ಹಣವನ್ನು ಸ್ವಲ್ಪ ಮರುಪಾವತಿ ಮಾಡಿದ್ದು ನಿಖರವಾಗಿ ಎಷ್ಟು ಮಾಡಿದ್ದಾರೆ ಎಂದು ಈಗ ನೆನಪಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ